**ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ**
**ತರೀಕೆರೆ**

**ಸಿ.ಸಿ.ನಂ. 4/2018**
**ದಿನಾಂಕಃ 10ನೇ ಮಾರ್ಚ್ 2021**

# ಆದೇಶ

ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ದಂ.ಪ್ರ.ಸಂಹಿತೆ ಕಲಂ 319 ರಡಿಯಲ್ಲಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ 1 ನೇ ಆರೋಪಿಯನ್ನು ಪ್ರಸ್ತುತ ಪ್ರಕರಣದಲ್ಲಿ ಆರೋಪಿಯನ್ನಾಗಿ ಸೇರಿಸಲು ಪ್ರಾರ್ಥಿಸಿರುತ್ತಾರೆ.

2. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ಅರ್ಜಿಯಲ್ಲಿ ಹೇಳಿರುವುದೇನೆಂದರೆ, ಭಾರತೀಯ ದಂಡ ಸಂಹಿತೆ ಕಲಂ 323, 504, 506, 354(ಬಿ) ಸಹವಾಚಕ ಕಲಂ 34 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದು, ಸದರಿ ಪ್ರಕರಣವು ವಿಚಾರಣೆಗಾಗಿ ಬಾಕಿ ಇರುತ್ತದೆ. ದಿನಾಂಕ 05.07.2016 ರಂದು ಬೆಳಗ್ಗೆ 9-00 ರ ಸಮಯಕ್ಕೆ ಆರೋಪಿತರಾದ ದೇವರಾಜ್, ಗಿರೀಶ್, ಸಿದ್ದರಾಮಪ್ಪ, ಬಸವರಾಜು ಇವರು ಒಟ್ಟಿಗೆ ಬಂದು ಪಿರ್ಯಾದುದಾರರ ಜಮೀನಿನ ಬೇಲಿಯನ್ನು ತೆಗೆದು ಉಳುಮೆ ಮಾಡಲು ಹೋದಾಗ ಪಿರ್ಯಾದುದಾರರು ಮತ್ತು ಅವರ ಭಾವನ ಮಗಳಾದ ಪುಷ್ಪ ತಡೆಯಲು ಹೋದಾಗ ಆರೋಪಿ ದೇವರಾಜ್ ಆವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿ ದೇವರಾಜ್ ಮತ್ತು ಗಿರೀಶ್ ಪಿರ್ಯಾದಿಯನ್ನು ಎಳೆದುಕೊಂಡು ತಲೆ ಕೂದಲು ಹಿಡಿದು ಆವಾಚ್ಯ ಶಬ್ದಗಳಿಂದ ಬೈದು ಎಳೆದಾಡಿ ಮೈಮೇಲಿದ್ದ ಬಟ್ಟೆಗಳನ್ನು ಹರಿದು ಮಾನಕ್ಕೆ ಭಂಗ ತರುವಂತೆ ಮಾಡಿ ಕೈಗಳಿಂದ ಹೊಡೆದು ಆರೋಪಿ ಬಸವರಾಜನು ಪಿರ್ಯಾದಿಗೆ ಆಪರೇಷನ್ ಆದ ಹೊಟ್ಟೆಗೆ ಕಾಲಿನಿಂದ ಒಡೆದು, ತುಳಿದು ಕೈಗಳಿಂದ ಹೊಡೆದರುತ್ತಾರೆಂದು ಹಾಗೂ ಪುಷ್ಪಾ ರವರಿಗೆ ಸಿಧ್ರಾಮಪ್ಪ ಬೈಯುತ್ತಾ ನಿನ್ನನ್ನು ಯಾರು ಮದುವೆ ಆಗದಂತೆ ಮಾಡುತ್ತೇನೆಂದು ಹೇಳಿ ಎಳೆದಾಡಿ ಮಾನಕ್ಕೆ ಕುಂದುಂಟು ಮಾಡಿರುತ್ತಾರೆನ್ನುವುದು ಪಿರ್ಯಾದುದಾರರ ಪ್ರಕರಣವಾಗಿರುತ್ತದೆ. ತನಿಖಾಧಿಕಾಯವರು ದೋಷಾರೋಪಣಾ ಪಟ್ಟಿ ಸಲ್ಲಿಸುವ ಕಾಲಕ್ಕೆ ಪ್ರಮುಖ ಆರೋಪಿ ದೇವರಾಜ್ ರವರನ್ನು ತನಿಖೆಯಿಂದ ಕೈ ಬಿಟ್ಟು ಉಳಿದ ಆರೋಪಿತರ

ಮೇಲೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಚಾಸಾ.1 ರವರು ತಮ್ಮ ದೂರಿಗೆ ಅನುಗುಣವಾಗಿ ಸಾಕ್ಷವನ್ನು ನುಡಿದಿದ್ದು, ಅವರು ತಮ್ಮ ಸಾಕ್ಷ್ಯದಲ್ಲಿ ತನಿಖೆಯಿಂದ ಕೈಬಿಟ್ಟಿರುವ ಆರೋಪಿಯೂ ಕೃತ್ಯವನ್ನು ಎಸಗಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಆದಕಾರಣ, ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತೇನೆಂದು ಹೇಳಿರುತ್ತಾರೆ.

3. ಉದ್ದೇಶಿತ ಆರೋಪಿಯ ಸಂಬಂಧಿಕರಿಗೆ ನೋಟೀಸ್ ಜಾರಿಯಾಗಿದ್ದರೂ ಸಹ ಅವರು ನ್ಯಾಯಾಲಯಕೆ ಗೈರುಹಾಜರಾಗಿರುತ್ತಾರೆ.

4. ವಾದವನ್ನು ಆಲಿಸಲಾಯಿತು.

5. ಪ್ರಸ್ತುತ ಪ್ರಕರಣದ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಪಿರ್ಯಾದಾರರು ದಾಖಲು ಮಾಡಿದ ದೂರಿನ ಆಧಾರದ ಮೇರೆಗೆ ಅಜ್ಜಂಪುರ ಪೊಲೀಸರು ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಅಜ್ಜಂಪುರ ಪೊಲೀಸ್ ಠಾಣಾ ಅಪರಾಧ ಸಂಖ್ಯೆ:205/2016 ರಲ್ಲಿ ಪ್ರ.ವ.ವರದಿಯನ್ನು 1 ರಿಂದ 4 ನೇ ಆರೋಪಿತರ ವಿರುದ್ಧ ದಾಖಲು ಮಾಡಿದ್ದು, ಸದರಿ ಆರೋಪಿತರು ಭಾ.ದಂ.ಸಂಹಿತೆ ಕಲಂ 447, 323, 354(ಬಿ), 505. 506 ಸಹವಾಚಕ ಕಲಂ 34 ರಡಿಯಲ್ಲಿ ಕೃತ್ಯ ಎಸಗಿರುತ್ತಾರೆಂದು ಆರೋಪಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿದ ನಂತರ ತನಿಖಾಧಿಕಾರಿಯವರು ಪ್ರಕರಣದ ಸಂಪೂರ್ಣ ತನಿಖೆಯನ್ನು ಮಾಡಿದ್ದು, ತನಿಖೆ ಪೂರ್ಣಗೊಂಡ ನಂತರ ಕೇವಲ 2 ರಿಂದ 4 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸದರಿ ಆರೋಪಿತರು ಕಲಂ 323, 504, 506, 354(ಬಿ) ಸಹವಾಚಕ ಕಲಂ 34 ರಡಿ ಕೃತ್ಯ ಎಸಗಿರುತ್ತಾರೆಂದು ಆರೋಪಿಸಿರುತ್ತಾರೆ. ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿದ ಆರೋಪಿತರ ವಿರುದ್ಧ ನ್ಯಾಯಾಲಯವು ಸಂಜ್ಞೆಯನ್ನು ತೆಗೆದುಕೊಂಡು ಸಮನ್ಸ್ ಕಳುಹಿಸಿದ್ದು, ಸದರಿ ಸಮನ್ಸ್ ಜಾರಿಯಾದ ನಂತರ ಸದರಿ ಆರೋಪಿತರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಸದರಿ ಆರೋಪಿತರ ವಿರುದ್ಧ

ದೋಷಾರೋಪಣೆಯನ್ನು ರಚಿಸಿದ ನಂತರ ಅಭಿಯೋಜನೆಯು ಚಾಸಾ.1 ರವರನ್ನು ಫ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಫ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೋಷಾರೋಪಣಾ ಪಟ್ಟಿಯಿಂದ ಕೈಬಿಟ್ಟಿರುವ ಆರೋಪಿಯಾದ ದೇವರಾಜ್ ರವರೂ ಸಹ ಅವರು ದೂರಿನಲ್ಲಿ ಆರೋಪಿರುವಂತೆ ಕೃತ್ಯ ಎಸಗಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ನಿಪಿ.1 ದೂರಿನ ಒಕ್ಕಣೆ ಮತ್ತು ಫ್ರಾಸಾ.1 ರವರ ಮುಖ್ಯ ವಿಚಾರಣೆಯನ್ನು ಗಮನಿಸಿದಾಗ ಮೇಲ್ನೋಟಕ್ಕೆ ಉದ್ದೇಶಿತ ಆರೋಪಿಯು ನಿಪಿ.1 ದೂರಿನಲ್ಲಿ ಆರೋಪಿಸಿದಂತೆ ಕೃತ್ಯ ಎಸಗಿರುತ್ತಾರೆಂದು ಕಂಡುಬರುವ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರು ಸಲ್ಲಿರುವ ಪ್ರಸ್ಸುತ ಅರ್ಜಿಯನ್ನು ಪರಿಗಣಿಸಿ ಉದ್ದೇಶಿತ ಆರೋಪಿಯು ಪ್ರಸ್ತುತ ಪ್ರಕರಣದಲ್ಲಿ ಆರೋಪಿಯನ್ನಾಗಿಸುವುದು ನ್ಯಾಯಸಮ್ಮತವಾಗಿರುತ್ತೆನ್ನುವ ಅಭಿಪ್ರಾಯಕ್ಕೆ ಬಂದು ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ದಂ.ಪ್ರ.ಸಂಹಿತೆ ಕಲಂ 319 ರಡಿಯಲ್ಲಿ ಸಲ್ಲಿಸಿರುವ ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿದ್ದು, ಉದ್ದೇಶಿತ ಆರೋಪಿಯನ್ನು ಪ್ರಸ್ತುತ ಪ್ರಕರಣದಲ್ಲಿ ಆರೋಪಿಯನ್ನಾಗಿ ಸೇರ್ಪಡೆಗೊಳಿಸಲಾಗಿದೆ.

Issue summons to the accused by name Devaraj by **16.04.2021.**

ಸಹಿ|-
**(ಪವಿತ್ರ.ಎಂ.ಡಿ)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾ.ದ.**
**ತರೀಕೆರೆ.**